**ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರು):–** ದಾನ ಪತ್ರ ಏನಿದೆ, ದಿನಾಂಕ: 01.04.1999 ರಲ್ಲಿ 10% ಇತ್ತು. ಆ 10% ತೆಗೆದು ಈಗ ದಾನಪತ್ರಕ್ಕೆ ಬೇಕಾಗಿರುವುದನ್ನು ಈ Gift Deed ಕೊಡುವುದಕ್ಕೆ 2001 ರಲ್ಲಿ ಅದನ್ನು 1,000–00 ರೂಪಾಯಿಗಳಿಗೆ ಇಳಿಸಿದ್ದೇವೆ. ಅವರು ಹೇಳುವುದು ನಗರ ಪ್ರದೇಶ ಮತ್ತು ಗ್ರಾಮೀಣ ಪ್ರದೇಶಕ್ಕೂ ತುಂಬಾ ವ್ಯತ್ಯಾಸ ಇದೆ.

**ಅಧ್ಯಕ್ಷರು:–** ಹಳ್ಳಿಗರಿಗೆ ಕಡಿಮೆ ಮಾಡಿ ಎಂದು ಹೇಳುತ್ತಿದ್ದಾರೆ.

**ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರು):–** ಆಗಬಹುದು ಸರ್, ಅದಕ್ಕೇನಿಲ್ಲ, ನಾನು ಆ ಬಗ್ಗೆ ಸಮಾಲೋಚನೆ ಮಾಡಿ, ಅದಕ್ಕೆ ವ್ಯವಸ್ಥೆ ಮಾಡುತ್ತೇವೆ.

**ಶ್ರೀ ಪಿ.ಆರ್. ಸುಧಾಕರ್ ಲಾಲ್:–** ನಗರಪ್ರದೇಶದಲ್ಲಿ ಜಾಸ್ತಿ ಮಾಡಿದರೆ ಸರ್ಕಾರಕ್ಕೂ ಕೂಡ ಹಣ ಜಾಸ್ತಿ ಸಂಗ್ರಹವಾಗುತ್ತದೆ.

**ಅಧ್ಯಕ್ಷರು:–** ನೋಡಿ, ಹಣ ಜಾಸ್ತಿ ಸಿಗುತ್ತದೆಂದು ಹೇಳುತ್ತಾರೆ ಆ ಬಗ್ಗೆ ನೋಡಿ.

**ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರು):–** ಆಯಿತು.

**ಅಧ್ಯಕ್ಷರು:–** ಸಿದ್ದು ನ್ಯಾಮಗೌಡರು.

## ಕೆರೆ ತುಂಬುವ ಯೋಜನೆ

**87(640); ಶ್ರೀ ಸಿದ್ದು ಬಿ. ನ್ಯಾಮಗೌಡ (ಜಮಖಂಡಿ)**

ಅ) ಬಿಜಾಪೂರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿರುವ ಕೆರೆಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು);

ಆ) ಸರ್ಕಾರವು ಕೆರೆ ತುಂಬುವ ಯೋಜನೆ ಕೈಗೊಂಡಿದ್ದು, ಅದರ ಸಂಪೂರ್ಣ ಮಾಹಿತಿ ನೀಡುವುದು;

ಇ) ಬಿಜಾಪೂರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಬರುವ ಎಲ್ಲಾ ಕೆರೆಗಳ ನೀರು ತುಂಬುವ ಯೋಜನೆಯ ಪ್ರಗತಿ ಯಾವ ಹಂತದಲ್ಲಿದೆ ಮತ್ತು ಈ ಯೋಜನೆಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು;

ಈ) ಈ ಯೋಜನೆಗಳಿಗೆ ತಗಲುವ ವೆಚ್ಚ ಎಷ್ಟು ಹಾಗೂ ಈಗಾಗಲೇ ಎಷ್ಟು ಹಣ ಖರ್ಚು ಮಾಡಲಾಗಿದೆ (ವಿವರ ನೀಡುವುದು)?

**ಶ್ರೀ ಶಿವರಾಜ ಎಸ್. ತಂಗಡಗಿ (ಮಾನ್ಯ ಸಣ್ಣ ನೀರಾವರಿ ಸಚಿವರು.)**

ಅ) ಬಿಜಾಪೂರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಕ್ರಮವಾಗಿ 149 ಮತ್ತು 62 ಕೆರೆಗಳಿವೆ. ತಾಲ್ಲೂಕುವಾರು ವಿವರ ಈ ಕೆಳಗಿನಂತಿದೆ.

| ಕ್ರ ಸಂ. | ಜಿಲ್ಲೆ | ತಾಲ್ಲೂಕು | ಕೆರೆಗಳ ಸಂಖ್ಯೆ | ಅಚ್ಚುಕಟ್ಟು (ಹೇ.ಗಳಲ್ಲಿ) |
|---|---|---|---|---|
| 1 | ಬಿಜಾಪೂರ | ಬ.ಬಾಗೇವಾಡಿ | 29 | 3529 |
| | | ಬಿಜಾಪೂರ | 44 | 7464 |
| | | ಇಂಡಿ | 35 | 5282 |
| | | ಮುದ್ದೇಬಿಹಾಳ | 21 | 3752 |
| | | ಸಿಂದಗಿ | 20 | 2064 |
| | | ಒಟ್ಟು | 149 | 22091 |
| 2 | ಬಾಗಲಕೋಟ | ಬದಾಮಿ | 14 | 2515 |
| | | ಬಾಗಲಕೋಟ | 5 | 735 |
| | | ಬೀಳಗಿ | 5 | 392 |
| | | ಹುನಗುಂದ | 9 | 3444 |
| | | ಜಮಖಂಡಿ | 17 | 1431 |
| | | ಮುಧೋಳ | 12 | 1521 |
| | | ಒಟ್ಟು | **62** | **10038** |

ಆ) **ಯಿಂದ ಈ) ವರೆಗೆ** ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಬಿಜಾಪುರ ಜಿಲ್ಲೆಯ 51 ಕೆರೆಗಳು, 8 ಬಾಂದಾರಗಳು ಮತ್ತು ಬಾಗಲಕೋಟೆ ಜಿಲ್ಲೆಯಲ್ಲಿನ 10 ಕೆರೆಗಳನ್ನು ಕೆರೆ ತುಂಬಿಸುವ ಯೋಜನೆಗಳ ಅನುಷ್ಠಾನಕ್ಕಾಗಿ ಕೃಷ್ಣಾ ಭಾಗ್ಯ ಜಲ ನಿಗಮಕ್ಕೆ ಹಸ್ತಾಂತರಿಸಲಾಗಿದೆ. ಅದರನ್ವಯ ಭೀಮಾ ಹಾಗೂ ಕೃಷ್ಣ ನದಿಗಳಿಂದ ನೀರನ್ನು ಎತ್ತಿ ಕೆರೆಗಳನ್ನು ತುಂಬಿಸಲು ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಶ್ರೀ ಸಿದ್ದು ಬಿ. ನ್ಯಾಮಗೌಡ, ಮಾನ್ಯ ವಿಧಾನಸಭೆ ಸದಸ್ಯರು ಮಂಡಿಸಿರುವ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 640ಕ್ಕೆ ಅನುಬಂಧ

ರೂ. ಕೋಟಿಗಳಲ್ಲಿ

| ಕ್ರ. ಸಂ. | ಕಾಮಗಾರಿಯ ಹೆಸರು | ಕೆರೆಗಳ ಹೆಸರು | ಅಂದಾಜು ಮೊತ್ತ | ಮೀಸಲಿಟ್ಟ ಹಣ | ಬಿಡುಗಡೆ ಮಾಡಿದ/ ಖರ್ಚಾದ ಮೊತ್ತ | ಸ್ಥಿತಿ |
|---|---|---|---|---|---|---|
| 1 | ಬಿಜಾಪೂರ ಜಿಲ್ಲೆಯ 16 ಕೆರೆಗಳು, 5 ಬಾಂದಾರಗಳು ಹಾಗೂ ಬಾಗಲಕೋಟೆ ಜಿಲ್ಲೆಯ 7 ಕೆರೆಗಳನ್ನು ತುಂಬಿಸುವ ಯೋಜನೆ | ಸರ್ಕಾರದ ಆದೇಶ ಸಂ.ಸನೀಇ 87 ಕೆಬಿದು 2004 ದಿನಾಂಕ:05.01.2007 ರಲ್ಲಿ ಬಿಜಾಪೂರ ಜಿಲ್ಲೆಯ 16 ಕೆರೆಗಳಾದ, ರಾಂಪುರ, ಬಬಲೇಶ್ವರ, ನಿಡೋಣಿ (ಹಳೆ), ಕುಮಠೆ (ಹೊಸ), ನಾಗರಾಳ, ನಿಡೋಣಿ (ಹೊಸ), ಕುಮಠೆ (ಹಳೆ), ಯಕ್ಕುಂಡಿ, ಕತ್ರಾಳ್, ಬಿಜ್ಜರಗಿ (ಹಳೆ), ಬಾಬಾನಗರ, ಚಕ್ಕಳಕಿ, ಸೋಮದೇವರಹಟ್ಟಿ, ಕನಮಡಿ, ಯತ್ನಾಳ, ಲೋಹಗಾಂವ, 5 ಬಾಂದಾರಗಳಾದ ಗೋಣಸಗಿ, ಹುಬನೂರು ಕಲ್ಲಾಪಟಗಿ ಕನಮಡಿ, ಕನಮಡಿ ಬ್ಯಾರೇಜ್‌ಗಳು ಹಾಗೂ ಬಾಗಲಕೋಟ ಜಿಲ್ಲೆಯ 7 ಕೆರೆಗಳಾದ ನಟಕಲ್, ಕನ್ನೋಳ್ಳಿ, ಗದ್ಯಾಳ (ಹಳೆ), ಗದ್ಯಾಳ (ಹೊಸ), ಪಾಜಬೀಳಗಿ-1, ಕುರುಗೋಡ್, ಪಾಜ ಬೀಳಗಿ-2 ಗಳನ್ನು (ಪ್ಯಾಕೇಜು-1) ತುಂಬಿಸಲು ಅನುಮೋದನೆಯನ್ನು ನೀಡಿರುತ್ತದೆ. | 108.00 | 12.00 | 93.50 | ಕಾಮಗಾರಿ ಬಹುತೇಕ ಪೂರ್ಣಗೊಂಡಿದೆ. |
| 2 | ಬಿಜಾಪೂರ ಜಿಲ್ಲೆಯ 16 ಕೆರೆಗಳು, 5 ಬಾಂದಾರಗಳು ಹಾಗೂ ಬಾಗಲಕೋಟೆ ಜಿಲ್ಲೆಯ 7 ಕೆರೆಗಳನ್ನು ತುಂಬಿಸುವ ಯೋಜನೆಯಲ್ಲಿ ಬರುವ ಹೆಚ್ಚುವರಿ 15 ಕೆರೆಗಳು | ಸರ್ಕಾರದ ಆದೇಶ ಸಂ.ಜಸಂಇ 19 ಕೆಬಿಎನ್ 2014 ದಿನಾಂಕ:03.05.2014 ರಲ್ಲಿ ಬಿಜಾಪೂರ ಜಿಲ್ಲೆಯ 15 ಕೆರೆಗಳಾದ ಸೋಮದೇವರಹಟ್ಟಿ, ಧನ್ನರಗಿ, ಜಾಲಗೇರಿ, ಲೋಹಗಾಂವ (ಪ್ಯಾಕೇಜ ಮಸ್ತು), ಬಿಜ್ಜರಗಿ, ಹೆಬ್ಬಾಳಹಟ್ಟಿ ಬಾಂದಾರ, ಕೊಟ್ಯಾಳ, ಗೋಣಿ, ಕಲಬೀಳಗಿ-1, ಕಲಬೀಳಗಿ-2 ತಿಕೋಟಾ, ರತ್ನಾಪೂರ, ಅಳಗಿವಾಳ ಹಾಗೂ ಬಾಂದಾರಗಳಾದ ನಾಗರಾಳ-1 ಮತ್ತು ನಾಗರಾಳ-2 ಇವುಗಳನ್ನು ತುಂಬಿಸಲು ಅನುಮೋದನೆ ನೀಡಿರುತ್ತದೆ. | 8.37 | 4.5 | 0.00 | ಟೆಂಡರ್ ಹಂತದಲ್ಲಿದೆ. |

| | | | | | | |
|---|---|---|---|---|---|---|
| 3 | ಬಿಜಾಪೂರ ಜಿಲ್ಲೆಯ ಇಂಡಿ ತಾಲೂಕಿನ 4 ಸಣ್ಣ ನೀರಾವರಿ ಕೆರೆಗಳನ್ನು ಸಂಪಿ ಲಿಫ್ಟ್ ಯೋಜನೆ ಮೂಲಕ ತುಂಬಿಸುವುದು. | ಸರ್ಕಾರದ ಆದೇಶ ಸಂ.ಜಸಂಇ 295 ಕೆಬಿಎನ್ 2013 ದಿನಾಂಕ:28.02.2014 ರಲ್ಲಿ ಬಿಜಾಪೂರ ಜಿಲ್ಲೆಯ ಇಂಡಿ ತಾಲೂಕಿನ 4 ಸಣ್ಣ ನೀರಾವರಿ ಕೆರೆಗಳಾದ ಇಂಚಗೇರಿ, ಚಡಚಣ, ಗೋಡಿಹಾಳ ಮತ್ತು ಜಿಗಜೇವಣಗಿ ಕೆರೆಗಳನ್ನು ಸಂಪಿ ಲಿಫ್ಟ್ ಯೋಜನೆ ಮೂಲಕ ತುಂಬಿಸಲು ಅನುಮೋದನೆ ನೀಡಿರುತ್ತದೆ. | 49.00 | 15.00 | 0.00 | ಟೆಂಡರ್ ಹಂತದಲ್ಲಿದೆ. |
| 4 | ಬಿಜಾಪೂರ ಜಿಲ್ಲೆಯ ಇಂಡಿ ತಾಲೂಕಿನ 8 ಸಣ್ಣ ನೀರಾವರಿ ಕೆರೆಗಳನ್ನು ಭುಯ್ಯಾರ್ ಲಿಫ್ಟ್ ಯೋಜನೆ ಮೂಲಕ ತುಂಬಿಸುವುದು. | ಸರ್ಕಾರದ ಆದೇಶ ಸಂ.ಜಸಂಇ 296 ಕೆಬಿಎನ್ 2013 ದಿನಾಂಕ:28.02.2014 ರಲ್ಲಿ ಬಿಜಾಪೂರ ಜಿಲ್ಲೆಯ ಇಂಡಿ ತಾಲೂಕಿನ 8 ಸಣ್ಣ ನೀರಾವರಿ ಕೆರೆಗಳಾದ, ಇಂಡಿ-1, ಇಂಡಿ-2, ಅರಜಿಗಿ, ತಡವಲಗಾ, ನಿಂಬಾಳ, ರಾಜನಾಳ, ಅತಗರ್ಗಾ ಮತ್ತು ಕೊತ್ನಾಳಗಳನ್ನು ಭುಯ್ಯಾರ್ ಲಿಫ್ಟ್ ಯೋಜನೆ ಮೂಲಕ ತುಂಬಿಸಲು ಅನುಮೋದನೆ ನೀಡಿರುತ್ತದೆ. | 45.00 | 15.00 | 0.00 | ಟೆಂಡರ್ ಹಂತದಲ್ಲಿದೆ. |
| 5 | ಮಮದಾಪೂರ, ಸಾರವಾಡ, ಬೇಗಂ ತಲಾಬ್, ಬಬಲೇಶ್ವರ, ತಿಡಗುಂದಿ ಹಾಗೂ ಬೂತನಾಳ ಕೆರೆ ತುಂಬುವ ಯೋಜನೆ | ಸರ್ಕಾರದ ಆದೇಶ ಸಂ.ಜಸಂಇ 13 ಕೆಬಿಎನ್ 2014 ದಿನಾಂಕ:28.02.2014 ರಲ್ಲಿ ಮಮದಾಪೂರ, ಸಾರವಾಡ, ಬೇಗಂ ತಲಾಬ್, ಬಬಲೇಶ್ವರ, ತಿಡಗುಂದಿ ಹಾಗೂ ಬೂತನಾಳ ಕೆರೆ ತುಂಬುವ ಯೋಜನೆಗೆ ಅನುಮೋದನೆ ನೀಡಿರುತ್ತದೆ. | 172.00 | 82.42 | 0.00 | ಟೆಂಡರ್ ಹಂತದಲ್ಲಿದೆ. |
| 6 | ಬಿಜಾಪೂರ ಜಿಲ್ಲೆಯ ಇಂಡಿ ತಾಲೂಕಿನ 9 ಸಣ್ಣ ನೀರಾವರಿ ಕೆರೆಗಳನ್ನು ಅಣಚಿ ಏತ ನೀರಾವರಿ ಯೋಜನೆ ಮೂಲಕ ತುಂಬಿಸುವುದು. | ಬಿಜಾಪೂರ ಜಿಲ್ಲೆಯ ಇಂಡಿ ತಾಲೂಕಿನ 20 ಸಣ್ಣ ನೀರಾವರಿ ಕೆರೆಗಳನ್ನು ಕೃಷ್ಣಾ ಭಾಗ್ಯ ಜಲ ನಿಗಮಕ್ಕೆ ಸರ್ಕಾರದ ಆದೇಶ ಸಂ.ಸನೀಇ 71 ಕೆಜಿದು 2008 ದಿನಾಂಕ:02.12.2008 ರಲ್ಲಿ ಹಸ್ತಾಂತರಿಸಿರುತ್ತದೆ. ಈ ಪೈಕಿ ಸರ್ಕಾರದ ಆದೇಶ ಸಂ.ಜಸಂಇ 104 ಕೆಬಿಎನ್ 2008 ದಿನಾಂಕ:05.04.2010 ರಲ್ಲಿ ಅಣಚಿ ಲಿಫ್ಟ್ ಮುಖಾಂತರ 8 ಕೆರೆಗಳಾದ, ಗುಂಡಾವನ-1, ಅಡಲಸಂಗ, ಹೊರ್ತಿ, ದೇಗಿನಾಳ, ಸಾವಳಸಂಗ, ಕೋಳೂರಗಿ, ಗುಂಡಾವನ-2, ಅರ್ಜನಾಳ, ನಂದರಗಿ ಕೆರೆಗಳನ್ನು ತುಂಬಿಸಲು ಅನುಮೋದನೆ ನೀಡಿರುತ್ತದೆ. | 33.75 | 20.00 | 0.00 | ಕಾಮಗಾರಿ ಪ್ರಗತಿಯಲ್ಲಿದ್ದು, ಕಾಮಗಾರಿಯನ್ನು ಸೆಪ್ಟಂಬರ್ 2013 ರಲ್ಲಿ ಪ್ರಾರಂಭಿಸಲಾಗಿದ್ದು, ಡಿಸೆಂಬರ್ 2015 ರೊಳಗೆ ಪೂರ್ಣಗೊಳಿಸ ಬೇಕಾಗಿದೆ. |

**ಶ್ರೀ ಸಿದ್ದು ಬಿ. ನ್ಯಾಮಗೌಡ:–** ಉತ್ತರವನ್ನು ಕೊಟ್ಟಿದ್ದಾರೆ. ಈ ಬಿಜಾಪುರ ಜಿಲ್ಲೆಯ 149 ಕೆರೆಗಳು ಮತ್ತು ಬಾಗಲಕೋಟೆ ಜಿಲ್ಲೆಯ 62 ಕೆರೆಗಳು ತುಂಬಬೇಕಾಗಿವೆ. ಈಗ ಒಂದು ಪ್ಯಾಕೇಜ್ ಮಾತ್ರ ಮುಕ್ತಾಯ ಹಂತದಲ್ಲಿದೆ. ಉಳಿದ ಪ್ಯಾಕೇಜ್‌ಗಳು ಟೆಂಡರ್ ಪ್ರಕ್ರಿಯೆ ಹಂತದಲ್ಲಿದೆ ಎಂದು ಬರೆದಿದ್ದಾರೆ. ಅದನ್ನು ಪೂರ್ಣ ಮಾಡಲಿಕ್ಕೆ ಯಾವಾಗ ಕ್ರಮ ಕೈಗೊಳ್ಳುತ್ತಾರೆ? ವಿನಾಕಾರಣ ಪ್ರತಿವರ್ಷ ಲಕ್ಷಗಟ್ಟಲೆ ಕ್ಯೂಸೆಕ್ಸ್ ನೀರು ಹೊರಗಡೆ ಹೋಗುತ್ತಿದೆ. ಬಹಳ ಮಹತ್ವವಾದಂಥ ಯೋಜನೆ ಇದು. ಬಿಜಾಪುರ ಜಿಲ್ಲೆ ಮತ್ತು ಬಾಗಲಕೋಟೆ ಜಿಲ್ಲೆಗೆ ಬರಗಾಲದಲ್ಲಿ ಈ ಕೆರೆಗಳು ತುಂಬಿಕೊಂಡರೆ ಸಾಕಷ್ಟು ಉಪಯೋಗವಾಗುತ್ತದೆ. ಅದಕ್ಕೋಸ್ಕರ ಈ ಮಹತ್ವವಾದಂಥ ಯೋಜನೆ ಪ್ರಾರಂಭವಾಗಿ ಸುಮಾರು 10 ವರ್ಷಗಳಾಯಿತು. ಇನ್ನು ಪೂರ್ಣವಾಗುವಂಥ ಹಂತದಲ್ಲಿಲ್ಲ. ಅದಕ್ಕೋಸ್ಕರ ಆದಷ್ಟು ಬೇಗ ಅದನ್ನು ಪೂರ್ಣಗೊಳಿಸಲಿಕ್ಕೆ ಕ್ರಮಕೈಗೊಳ್ಳಬೇಕೆಂದು ಕೋರುತ್ತೇನೆ. ಸರ್ಕಾರ ಪ್ರತಿವರ್ಷ 10,000–00 ಕೋಟಿ ರೂಪಾಯಿಗಳಷ್ಟು ಅನುದಾನವನ್ನು ಕೊಡುತ್ತದೆ ಎಂದು ಬಜೆಟ್‌ನಲ್ಲಿ ಹೇಳಿದ್ದಾರೆ. ಕೆಲವೆಲ್ಲಾ ಸೇರಿದರೆ 300–00 ಕೋಟಿ ರೂಪಾಯಿಗಳಿಗಿಂತ ಕಡಿಮೆ ಆಗುತ್ತದೆ. ಅದಕ್ಕೋಸ್ಕರ ಈ ವರ್ಷ ಹೆಚ್ಚಿಗೆ ಹಣ ಕೊಟ್ಟು ಒಂದೂವರೆ ವರ್ಷಗಳಲ್ಲಿ ಮುಗಿಸಬೇಕೆಂದು ನಾನು ವಿನಂತಿಸುತ್ತೇನೆ.

**ಶ್ರೀ ಶಿವರಾಜ ಎಸ್. ತಂಗಡಗಿ (ಮಾನ್ಯ ಸಣ್ಣ ನೀರಾವರಿ ಸಚಿವರು):–** ಮಾನ್ಯ ಅಧ್ಯಕ್ಷರೆ, ನಿಜವಾಗಿಯೂ ಎಲ್ಲಾ ಕೆರೆಗಳು ಸಣ್ಣ ನೀರಾವರಿ ಇಲಾಖೆಗೆ ಸೇರಿವೆ ಆದರೆ ಕೆಲಸ ಮತ್ತು ಟೆಂಡರ್ ಕರೆಯುತ್ತಿರುವುದು Major Irrigation ಜಲಸಂಪನ್ಮೂಲ ಇಲಾಖೆಯವರದು. ಕೃಷ್ಣಾ ಭಾಗ್ಯ ಜಲ ನಿಗಮಕ್ಕೆ ಆ ಕೆಲಸ ಬರುವುದರಿಂದ ಕೆರೆಗಳು ಮಾತ್ರ ನಮ್ಮದು, ಕಾಮಗಾರಿಗಳ ಬಗ್ಗೆ ಅವರು ಪ್ರಶ್ನೆ ಕೇಳಿರುವುದರಿಂದ ನಾನು ಇದ್ದ ಪರಿಸ್ಥಿತಿ ಬಗ್ಗೆ ಹೇಳಿದ್ದೇನೆ. ಅದನ್ನು ಯಾವಾಗ ಮುಗಿಯುತ್ತದೆ? ಏನು ಮಾಡುತ್ತಾರೆ ಎಂಬ ಬಗ್ಗೆ ಜಲಸಂಪನ್ಮೂಲ ಸಚಿವರನ್ನು ಕೇಳಿದರೆ ಗೊತ್ತಾಗುತ್ತದೆ.

**ಅಧ್ಯಕ್ಷರು:–** ಈಗ ಒಂದು ಕೆಲಸ ಮಾಡಿ, ಎರಡು ದಿವಸಗಳಲ್ಲಿ ನೀರಾವರಿ ಬಗ್ಗೆ ಚರ್ಚೆಗೆ ಬರುತ್ತದೆ. ಆ ಸಂದರ್ಭದಲ್ಲಿ ಇದನ್ನು ವಿವರವಾಗಿ ಚರ್ಚೆ ಮಾಡಿ.

**ಶ್ರೀ ಶಿವಾನಂದ ಎಸ್. ಪಾಟೀಲ್:–** ಅಲ್ಲ ಸರ್, ಅವರು ಕೇಳುವ ಪ್ರಶ್ನೆ ಏನಾಗಿದೆ, ಆರು ವರ್ಷಗಳಿಂದ ಈ ಕೆರೆಗಳ ಕಾಮಗಾರಿ ನಡೆಯುತ್ತಿದೆ. First package ಮುಗಿದಿಲ್ಲ. ಇನ್ನೂ ಏಳು package announce ಮಾಡಿದ್ದೀರಿ. But, Major and Minor Irrigation ನಿಮ್ಮಿಬ್ಬರಲ್ಲಿ co-ordination ಇಲ್ಲ.

**ಶ್ರೀ ಶಿವರಾಜ ಎಸ್. ತಂಗಡಗಿ (ಮಾನ್ಯ ಸಣ್ಣ ನೀರಾವರಿ ಸಚಿವರು):–** ಅದು ಇದಕ್ಕೆ ಸಂಬಂಧವಿಲ್ಲ.

**ಶ್ರೀ ಶಿವಾನಂದ ಎಸ್. ಪಾಟೀಲ್:–** ಮತ್ತೆ ದುಡ್ಡು ಅವರಿಂದ ತೆಗೆದುಕೊಳ್ಳುತ್ತೀರಿ, ಕೆಲಸ ಮಾತ್ರ ನೀವು ಏಕೆ ಮಾಡುವುದಿಲ್ಲ.

**ಶ್ರೀ ಶಿವರಾಜ ಎಸ್. ತಂಗಡಗಿ (ಮಾನ್ಯ ಸಣ್ಣ ನೀರಾವರಿ ಸಚಿವರು):–** ಸರ್, ನೋಡಿ, ದಯಮಾಡಿ ತಪ್ಪಾಗಿ ಅರ್ಥ ಮಾಡಿಕೊಳ್ಳಬೇಡಿ. ನಾವು ಕೆಲಸವನ್ನು ಮಾಡುತ್ತಿಲ್ಲ. ಸಣ್ಣ ನೀರಾವರಿ ಇಲಾಖೆ ಯಾವುದೇ ಅಧಿಕಾರಿಗಳು ಆ ಕೆಲಸವನ್ನು ಮಾಡುತ್ತಿಲ್ಲ. ಕೆರೆ ಮಾತ್ರ ನಮ್ಮದು, ಆ ಕೆರೆಯನ್ನು ಜಲಸಂಪನ್ಮೂಲ ಇಲಾಖೆಯವರಿಗೆ Major Irrigation ನವರಿಗೆ ಹಸ್ತಾಂತರ ಮಾಡಿದ್ದೇವೆ ಅಷ್ಟೇ.

**ಶ್ರೀ ಶಿವಾನಂದ ಎಸ್. ಪಾಟೀಲ್:–** ನೀವಿಬ್ಬರೂ ಮಾತನಾಡಿಕೊಳ್ಳುವುದಕ್ಕಾದರೂ ಆಗುತ್ತದೋ ಇಲ್ಲವೋ?

**ಶ್ರೀ ಶಿವರಾಜ ಎಸ್. ತಂಗಡಗಿ (ಮಾನ್ಯ ಸಣ್ಣ ನೀರಾವರಿ ಸಚಿವರು):–** ಅದು ನಮಗೆ ಬರುವುದಿಲ್ಲ. ನಾವು ಅವರಿಗೆ ಹಸ್ತಾಂತರ ಮಾಡಿದ್ದೇವೆ.

**ಶ್ರೀ ಶಿವಾನಂದ ಎಸ್. ಪಾಟೀಲ್:–** ಸರಿ ಸರ್, ಈಗಾಗಲೇ ನೀವು ಏಳು ಪ್ಯಾಕೇಜ್‌ಗಳಿವೆ. ಮಾನ್ಯ ಯಡಿಯೂರಪ್ಪನವರು ಇರುವಾಗ announce ಮಾಡಿದ್ದೂ ಒಂದು ಪ್ಯಾಕೇಜ್ ಸಹ ಮುಗಿದಿಲ್ಲ.

**ಶ್ರೀ ಶಿವರಾಜ ಎಸ್. ತಂಗಡಗಿ (ಮಾನ್ಯ ಸಣ್ಣ ನೀರಾವರಿ ಸಚಿವರು):–** ಏಳು ಪ್ಯಾಕೇಜ್‌ಗಳ ಬಗ್ಗೆ ವಿವರವನ್ನು ಕೊಟ್ಟಿದ್ದೇವೆ. ನಾನು ಹೇಳುವುದು ನಿಮಗೆ ಅರ್ಥವಾಗುತ್ತಿಲ್ಲ.

**ಶ್ರೀ ಶಿವಾನಂದ ಎಸ್. ಪಾಟೀಲ್:–** ನೀವಿಬ್ಬರೂ ಮಂತ್ರಿಗಳು ಕುಳಿತು ಮಾತನಾಡಿಕೊಳ್ಳಬೇಕಲ್ಲವೇ?

**ಶ್ರೀ ಶಿವರಾಜ ಎಸ್. ತಂಗಡಗಿ (ಮಾನ್ಯ ಸಣ್ಣ ನೀರಾವರಿ ಸಚಿವರು):–** ಸರ್, ಜಲಸಂಪನ್ಮೂಲ ಇಲಾಖೆಯವರನ್ನು ಕೇಳಿದರೆ ಈ ಬಗ್ಗೆ ಪೂರ್ಣ ಪ್ರಮಾಣದ ಮಾಹಿತಿ ದೊರೆಯುತ್ತದೆ.

**ಅಧ್ಯಕ್ಷರು:–** ಹಾಗಲ್ಲ, ಕೆರೆಗಳು ನಿಮ್ಮವು, ಕಾಮಗಾರಿ ಮಾಡಿಸುವುದಕ್ಕೋಸ್ಕರ ನೀವು ನಿಗಮಕ್ಕೆ ವಹಿಸಿಕೊಟ್ಟಿದ್ದೀರಿ. ಅದರ ಪ್ರಗತಿಯನ್ನು ತೆಗದುಕೊಳ್ಳುವುದಕ್ಕೆ ನಿಮಗೆ ಅಧಿಕಾರ ಇದ್ದೇ ಇದೆಯಲ್ಲಾ?

**ಶ್ರೀ ಶಿವರಾಜ ಎಸ್. ತಂಗಡಗಿ (ಮಾನ್ಯ ಸಣ್ಣ ನೀರಾವರಿ ಸಚಿವರು):–** ಪ್ರಗತಿಯ ವಿವರ ತೆಗೆದುಕೊಳ್ಳುವುದಕ್ಕೆ ನಮಗೆ ಅಧಿಕಾರ ಇದೆ.

(ಗೊಂದಲ)

**ಶ್ರೀ ಶಿವಾನಂದ ಎಸ್. ಪಾಟೀಲ್:–** ಪ್ರಗತಿಯೂ ಇಲ್ಲ, ನೀರು ಸಹ ಬಂದಿಲ್ಲ.

**ಶ್ರೀ ಶಿವರಾಜ ಎಸ್. ತಂಗಡಗಿ (ಮಾನ್ಯ ಸಣ್ಣ ನೀರಾವರಿ ಸಚಿವರು):–** ಅಧ್ಯಕ್ಷರೆ, ಇದರಲ್ಲಿ ಆರು ಪ್ಯಾಕೇಜ್‌ಗಳು ಆಗಿವೆ. ಅದರಲ್ಲಿ ಒಂದು ಪ್ಯಾಕೇಜ್ ಮಾತ್ರ ಮುಗಿಯುವ ಹಂತದಲ್ಲಿದೆ. ಇನ್ನೊಂದು ಪ್ಯಾಕೇಜ್ ಕಾಮಗಾರಿ ನಡೆಯುತ್ತಿದೆ. ಉಳಿದ ಪ್ಯಾಕೇಜ್‌ಗಳು ಟೆಂಡರ್ ಹಂತದಲ್ಲಿದೆ. ಜಲಸಂಪನ್ಮೂಲ ಸಚಿವರಿಗೆ ಇದರ ಬಗ್ಗೆ ಪೂರ್ಣ ಮಾಹಿತಿ ದೊರೆಯುತ್ತದೆ.

**ಅಧ್ಯಕ್ಷರು:–** ಪರವಾಗಿಲ್ಲ. ವರದಿಯನ್ನು ತರಿಸಿ ಕೊಡಿ.

**ಶ್ರೀ ಶಿವರಾಜ ಎಸ್. ತಂಗಡಗಿ (ಮಾನ್ಯ ಸಣ್ಣ ನೀರಾವರಿ ಸಚಿವರು):–** ಅದರ ವರದಿಯನ್ನು ತರಿಸಿಕೊಂಡು ಇವರಿಗೆ ಪೂರ್ಣ ಉತ್ತರವನ್ನು ಒದಗಿಸುತ್ತೇನೆ.

**ಶ್ರೀ ಸಿದ್ದು ಬಿ ನ್ಯಾಮಗೌಡ:–** ಇರುವ ಪ್ಯಾಕೇಜ್‌ನಲ್ಲಿ ಇನ್ನು 12 ಕೆರೆಗಳು ಉಳಿದಿವೆ. ಅಷ್ಟೊಂದು ಕೆಲಸ ಉಳಿದಿವೆ. ಅದನ್ನು ಮೂರು ತಿಂಗಳುಗಳಲ್ಲಿ ಮಾಡಬೇಕು.

**ಅಧ್ಯಕ್ಷರು:–** ನ್ಯಾಮಗೌಡರೇ, ಯಾವ್ಯಾವ ಪ್ಯಾಕೇಜ್‌ನಲ್ಲಿ ಯಾವಾಗ ಕೊಟ್ಟರು, ಅವರಿಗೆ ಆಗ ಕಂಡಿಷನ್ ಏನಾಗಿತ್ತು? ಈಗ ಎಷ್ಟು ಪ್ರಗತಿಯಾಗಿದೆ? ಹಣ ಎಷ್ಟು ಖರ್ಚಾಗಿದೆ? ಯಾವ ಹಂತದಲ್ಲಿದೆ ಎಂಬ ಬಗ್ಗೆ ಒಂದು ವರದಿಯನ್ನು ಕೊಡಿ.

**ಶ್ರೀ ಸಿದ್ದು ಬಿ. ನ್ಯಾಮಗೌಡ:–** ಅದನ್ನೇ ಕೇಳಿದ್ದೇವೆ. ಎಲ್ಲದಕ್ಕೂ ಟೆಂಡರ್ ಹಂತದಲ್ಲಿ ಎಂದು ಉತ್ತರ ಕೊಟ್ಟಿದ್ದಾರೆ.

**ಶ್ರೀ ಶಿವರಾಜ ಎಸ್. ತಂಗಡಗಿ (ಮಾನ್ಯ ಸಣ್ಣ ನೀರಾವರಿ ಸಚಿವರು):–** ಸರ್, ಪೂರ್ಣ ಪ್ರಮಾಣದ ಉತ್ತರದಲ್ಲಿ ವಿವರ ಕೊಟ್ಟಿದ್ದೇನೆ. ಮೊದಲನೆಯ ಹಂತದ್ದು 108 ಕೋಟಿ ರೂಪಾಯಿಗಳು, ಅದರಲ್ಲಿ 12 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದು 93 ಕೋಟಿ 50 ಲಕ್ಷ ರೂಪಾಯಿಗಳಷ್ಟು ಹಣ ಈಗ ಬಿಡುಗಡೆಯಾಗಿದೆ. ಆ ಮೊತ್ತವನ್ನು ಕೊಟ್ಟಿದ್ದೇವೆ. ಇನ್ನೂ balance ಸ್ವಲ್ಪ ಇದೆ. ಮೊದಲನೇ ಹಂತದ ಕಾಮಗಾರಿ ಬಹುತೇಕ ಪೂರ್ಣಗೊಂಡಿದೆ. ಉಳಿದದ್ದು ಎರಡನೆಯದು 8.37 ಲಕ್ಷ ರೂಪಾಯಿಗಳು, ಮೂರನೆಯದು 49.00 ಕೋಟಿ ರೂಪಾಯಿಗಳು, ನಾಲ್ಕನೆಯದು 45.00 ಕೋಟಿ ರೂಪಾಯಿಗಳು, ಐದನೆಯದು 172.00 ಕೋಟಿ ರೂಪಾಯಿಗಳು. ಆರನೆಯ ಕಾಮಗಾರಿ 33.00 ಕೋಟಿ ರೂಪಾಯಿಗಳದ್ದು ಅದು ಪ್ರಗತಿಯ ಹಂತದಲ್ಲಿದ್ದು ಡಿಸೆಂಬರ್ 15 ರೊಳಗಾಗಿ ಆ ಕಾಮಗಾರಿ ಮುಗಿಯುತ್ತದೆ. ಉಳಿದದ್ದು ಏನಿವೆ, ಜಲಸಂಪನ್ಮೂಲ ಸಚಿವರು ಟೆಂಡರ್ ಪ್ರಕ್ರಿಯೆಯಲ್ಲಿಟ್ಟಿದ್ದಾರೆ.

**ಶ್ರೀ ಶಿವಾನಂದ ಎಸ್. ಪಾಟೀಲ್:–** ನಾವು ಕೇಳುತ್ತಿರುವುದು, ಈ ಕೆರೆಗಳಿಗೆ ಇನ್ನೂ ನೀರೇ ಬಂದಿಲ್ಲ.

**ಅಧ್ಯಕ್ಷರು:–** ಇಲ್ಲಿ ನೀರು ಬರುವ ವಿಷಯವಲ್ಲ ಇರುವುದು.

(ಗೊಂದಲ)

**ಶ್ರೀ ಶಿವರಾಜ ಎಸ್. ತಂಗಡಗಿ (ಮಾನ್ಯ ಸಣ್ಣ ನೀರಾವರಿ ಸಚಿವರು):–** ಮಾನ್ಯ ಅಧ್ಯಕ್ಷರೆ, ಶಿವಾನಂದ ಪಾಟೀಲ್‌ರವರು ನನ್ನ ಮಾತನ್ನು ಅರ್ಥ ಮಾಡಿಕೊಳ್ಳುತ್ತಿಲ್ಲ.

**ಶ್ರೀ ಸಿದ್ದು ನ್ಯಾಮಗೌಡ:–** ಎಂ.ಬಿ. ಪಾಟೀಲ್‌ರವರು ಕೆಲಸ ಮಾಡಿಸುತ್ತಿರುವುದು.

(ಗೊಂದಲ)

(ಗೊಂದಲ)

**ಶ್ರೀ ಶಿವರಾಜ ಎಸ್. ತಂಗಡಗಿ:–** ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಬೆಂಗಳೂರಿನಲ್ಲಿರುವ BDA, BBMP ಗೂ ಸಹ ನಮ್ಮ ಸಣ್ಣ ನೀರಾವರಿ ಕೆರೆಗಳನ್ನು ಹಸ್ತಾಂತರ ಮಾಡಿದ್ದೇವೆ. ಆದರೆ, ಕಾಮಗಾರಿಗಳನ್ನು ನೋಡುತ್ತಿರುವುದು ಯಾರಿಗೆ ಹಸ್ತಾಂತರ ಮಾಡಿದ್ದೇವೆ. ಅವರೇ ನೋಡುತ್ತಿದ್ದಾರೆ.

**ಅಧ್ಯಕ್ಷರು:–** ಆಯಿತು. ಆದರೂ ನಿಮಗೆ ಜವಾಬ್ದಾರಿಯಿದೆ.

(ಗೊಂದಲ)

**ಶ್ರೀ ಶಿವರಾಜ ಎಸ್. ತಂಗಡಗಿ:–** ಅದು ನಿಮಗೆ ಅರ್ಥವಾಗುತ್ತಿಲ್ಲ.

(ಗೊಂದಲ)

**ಶ್ರೀ ಎಸ್. ಶಿವಾನಂದ ಪಾಟೀಲ್:–** ₹ 100 ಕ್ಕೆ 10 ಕೋಟಿ ಖರ್ಚಾಗಿದೆ. ನೀರೂ ಬಂದಿಲ್ಲ. at least ನೀವು ಮಂತ್ರಿಗಳು ಇಬ್ಬರೂ ಮಾತನಾಡಿಕೊಳ್ಳಿ.

**ಶ್ರೀ ಸಿದ್ದು ಬಿ. ನ್ಯಾಮಗೌಡ:–** ಈ ಪ್ರಶ್ನೆಯನ್ನು ಭಾರಿ ನೀರಾವರಿ ಸಚಿವರಿಗೆ ವರ್ಗಾಯಿಸಿ, ಸರ್.

(ಗೊಂದಲ)

**ಅಧ್ಯಕ್ಷರು:–** ಈಗ ಒಂದು ನಿಮಿಷ ಇರಿ. ಈಗ as on today ಎಷ್ಟು ಪ್ರಗತಿಯಾಗಿದೆ, ಏನು ಷರತ್ತಿತ್ತು ಆ ಪ್ರಕಾರ ನಡೆದುಕೊಂಡಿದ್ದಾರೆಯೇ ಎಂಬ ಬಗ್ಗೆ ಒಂದು ವರದಿ ತರಿಸಿ ಈ ಸದನಕ್ಕೆ ಕೊಡಿ.

**ಶ್ರೀ ಶಿವರಾಜ ಎಸ್. ತಂಗಡಗಿ:–** ಅವರಿಗೆ ಇನ್ನೂ details ಬೇಕೆಂದರೆ ನಾನು ಜಲಸಂಪನ್ಮೂಲ ಸಚಿವರ ಜೊತೆಗೆ ಮಾತನಾಡುತ್ತೇನೆ.

**ಶ್ರೀ ಎಸ್. ಶಿವಾನಂದ ಪಾಟೀಲ್:–** ಎಸ್ಟಿಮೇಟ್ ಅಮೌಂಟ್ ಬರೆದಿದ್ದಾರೆ. ಯಾವ್ಯಾವ ಕೆರೆಗಳಿಗೆ ನೀರು ಬಿಡಬೇಕಾಗಿತ್ತು ಅಷ್ಟು ಬರೆದಿದ್ದಾರೆ. ಅದರಲ್ಲಿ ನನ್ನ ತಾಲ್ಲೂಕಿನ ಕೆರೆಗಳೂ ಇವೆ, ಅವರ ಜಿಲ್ಲೆಯ ಕೆರೆಗಳೂ ಇವೆ. ಇದಕ್ಕೆ ₹ 700 ಕೋಟಿಗಳನ್ನು ವ್ಯಯ ಮಾಡುತ್ತಿದ್ದಾರೆ. ಆದರೆ, ದುರ್ದೈವ 100 ಕೋಟಿ ರೂಪಾಯಿಗಳು ಸಹಿತ ಖರ್ಚಾಗಿಲ್ಲ.

**ಶ್ರೀ ಶಿವರಾಜ ಎಸ್. ತಂಗಡಗಿ:–** ನಿಮಗೆ ಅರ್ಥವಾಗಿಲ್ಲ.

**ಶ್ರೀ ಎಸ್. ಶಿವಾನಂದ ಪಾಟೀಲ್:–** ನಿಮ್ಮ ಸಲುವಾಗಿ ಹೇಳುತ್ತಿಲ್ಲ. ಭಾರಿ ನೀರಾವರಿ ಸಚಿವರಿಗೆ ಹೇಳುತ್ತಿದ್ದೇನೆ.

(ಗೊಂದಲ)

**ಅಧ್ಯಕ್ಷರು:–** ಈಗ ಚರ್ಚೆಗೆ ಹಾಕಲಿ.

(ಗೊಂದಲ)

**ಶ್ರೀ ಸಿದ್ದು ಬಿ. ನ್ಯಾಮಗೌಡ:–** ಭಾರಿ ನೀರಾವರಿ ಸಚಿವರಿಗೆ ಈ ಪ್ರಶ್ನೆಯನ್ನು ಹಾಕಿ, ಸರ್. ಈ ಪ್ರಶ್ನೆಯನ್ನು ಭಾರಿ ನೀರಾವರಿ ಸಚಿವರಿಗೆ ಕೇಳಿದರೆ ಸರಿಹೋಗುತ್ತದೆ, ಸರ್.

(ಗೊಂದಲ)

**ಶ್ರೀ ಸಿದ್ದು ಬಿ. ನ್ಯಾಮಗೌಡ:–** ದುಡ್ಡು Major Irrigation Departmentದು. ಅವರ ಹತ್ತಿರ ಕೇಳಿದರೆ ಮಾಹಿತಿ ಸಿಗುತ್ತದೆ.

**ಶ್ರೀ ಎಸ್. ಶಿವಾನಂದ ಪಾಟೀಲ್:–** ಕೆರೆ ನಿಮ್ಮೂರಿನದು. ದುಡ್ಡು ಅವರದು. ಈ ಎರಡೂ ದುಡ್ಡು ಸರ್ಕಾರದ್ದೇ ಅಲ್ಲವೇ?

**ಅಧ್ಯಕ್ಷರು:–** ಅವರ ಈ ಪ್ರಶ್ನೆಗೆ 'ಬಿಜಾಪುರ ಜಿಲ್ಲೆ ಮತ್ತು ಹಾಗೂ ಬಾಗಲಕೋಟೆ ಜಿಲ್ಲೆಗಳಲ್ಲಿ ಬರುವ ಎಲ್ಲಾ ಕೆರೆಗಳ ನೀರು ತುಂಬುವ ಯೋಜನೆಯ ಪ್ರಗತಿ ಯಾವ ಹಂತದಲ್ಲಿದೆ ಮತ್ತು ಈ ಯೋಜನೆಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು' ಎಂಬುದು ನಿಮ್ಮ ಪ್ರಶ್ನೆ. ಅದಕ್ಕೆ ನೀವು ಏನು ಹೇಳಿದ್ದೀರಿ ಎಂದರೆ, 'ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಬಿಜಾಪುರ ಜಿಲ್ಲೆಯ 51 ಕೆರೆಗಳು, 8 ಬಾಂದಾರಗಳು ಮತ್ತು ಬಾಗಲಕೋಟೆ ಜಿಲ್ಲೆಯಲ್ಲಿನ 10 ಕೆರೆಗಳನ್ನು ಕೆರೆ ತುಂಬಿಸುವ ಯೋಜನೆಗಳ ಅನುಷ್ಠಾನಕ್ಕಾಗಿ ಕೃಷ್ಣಾ ಭಾಗ್ಯ ಜಲ ನಿಗಮಕ್ಕೆ ಹಸ್ತಾಂತರಿಸಲಾಗಿದೆ. ಅದರನ್ವಯ ಭೀಮಾ ಹಾಗೂ ಕೃಷ್ಣಾ ನದಿಗಳಿಂದ ನೀರನ್ನು ಎತ್ತಿ ಕೆರೆಗಳನ್ನು ತುಂಬಿಸಲು ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.' ಆದರೆ, ಇದಕ್ಕೆ specific ಆಗಿ ನಿವು ಉತ್ತರ ಹೇಳಬೇಕಲ್ಲವೇ? ಯಾವಾಗ ಪೂರ್ಣಗೊಳಿಸಲಾಗುವುದು ಎಂದು ಹೇಳಬೇಕು.

**ಶ್ರೀ ಶಿವರಾಜ ಎಸ್. ತಂಗಡಗಿ:–** ಜಲಸಂಪನ್ಮೂಲ ಇಲಾಖೆಗೆ ಅದು ಹಸ್ತಾಂತರವಾಗಿರುವುದೆ. ಎಂದು ಇದರಲ್ಲಿ ಬಹಳ ಸ್ಪಷ್ಟವಾಗಿ ಬರೆದಿದ್ದೇನೆ. ಕೃಷ್ಣಾ ಭಾಗ್ಯ ಜಲ ನಿಗಮಕ್ಕೆ ಹಸ್ತಾಂತರಿಸಲಾಗಿದೆ ಎಂದು ಬರೆದಿದ್ದೇನೆ.

**ಅಧ್ಯಕ್ಷರು:–** ಕೆರೆ ಹಸ್ತಾಂತರವಾಗಿಲ್ಲ. ವರ್ಕ್‌ಅನ್ನು ಅಂದರೆ ಕಾಮಗಾರಿಯನ್ನು ಕೊಟ್ಟಿದ್ದೀರಿ.

**ಶ್ರೀ ಶಿವರಾಜ ಎಸ್. ತಂಗಡಗಿ:–** ಕೆರೆಗಳನ್ನೂ ಅವರಿಗೇ ಕೊಟ್ಟಿದ್ದೇವೆ. ಕೆಲಸವನ್ನೂ ಅವರೇ ಮಾಡುತ್ತಿದ್ದಾರೆ. ಸಣ್ಣ ನೀರಾವರಿ ಇಲಾಖೆಗೆ ಸಂಬಂಧವಿಲ್ಲ ಅಷ್ಟೇ.

(ಗೊಂದಲ)

**ಅಧ್ಯಕ್ಷರು:–** ಸ್ವಾಮಿ ಸಮಯ ಕಡಿಮೆಯಿದೆ. ನೀವು ಒಂದು ಕೆಲಸ ಮಾಡಿ.

**ಶ್ರೀ ಸಿದ್ದು ಬಿ. ನ್ಯಾಮಗೌಡ:–** ಇದು ಬಹಳ ದೊಡ್ಡ ಸಮಸ್ಯೆ, ಸರ್. ದಯವಿಟ್ಟು ಇದಕ್ಕೆ ಆದ್ಯತೆ ಕೊಡಬೇಕು, ಸರ್.

(ಗೊಂದಲ)

**ಅಧ್ಯಕ್ಷರು:–** ಈ ಪ್ರಶ್ನೆಯನ್ನು ದೊಡ್ಡ ನೀರಾವರಿ ಇಲಾಖೆಗೆ ವರ್ಗಾಯಿಸಲಾಗಿದೆ. ಆಯಿತೇ?

**ಶ್ರೀ ಎಸ್. ಶಿವಾನಂದ ಪಾಟೀಲ್:–** ಸರ್, ಮಾನ್ಯ ಯಡಿಯೂರಪ್ಪನವರ ಕಾಲದಿಂದ ನಡೆಯುತ್ತಲೇ ಬರುತ್ತಿದೆ.

**ಅಧ್ಯಕ್ಷರು:–** ಅದು ಬೇಡ್ರಿ. ನಿಮ್ಮ ಕಾಲದ್ದು ಹೇಳಿ ಸಾಕು. ಒಂದು ವರ್ಷ ಆಗಿದೆ.

**ಶ್ರೀ ಜೆ.ಟಿ. ಪಾಟೀಲ್:–** ಈ ಯೋಜನೆಯೊಳಗೆ ಬಾಗಲಕೋಟ ಜಿಲ್ಲೆಯೊಳಗೆ ಒಂದೇ ಒಂದು ಕೆರೆ ಸಹ ತುಂಬಿಲ್ಲ.

**ಶ್ರೀ ಎಸ್. ಶಿವಾನಂದ ಪಾಟೀಲ್:–** ಕೆರೆ ತುಂಬಿಲ್ಲ. ದುಡ್ಡು ಖರ್ಚಾಗಿದೆ. 100% ದುಡ್ಡು ಖರ್ಚಾಗಿದೆ.

**ಅಧ್ಯಕ್ಷರು:–** ಈಗ ಒಂದು ಕೆಲಸ ಮಾಡೋಣ. ಅವರಿಗೆ ವಹಿಸಿಕೊಡೋಣ, ನಂತರ ಇದರ ಪ್ರಗತಿಯೇನಾಗಿದೆ ಎಂದು ಅವರಿಂದ ಒಂದು ವರದಿ ಕೇಳೋಣ.

**ಶ್ರೀ ಎಸ್. ಶಿವಾನಂದ ಪಾಟೀಲ್:–** ಉತ್ತರ ಅವರಲ್ಲಿಯೇ ಇದೆ. Pilot programme start ಆಗಿದ್ದೇ ಅವರ ಕ್ಷೇತ್ರದಲ್ಲಿ.

**ಅಧ್ಯಕ್ಷರು:–** ಯಾರ ಕ್ಷೇತ್ರದ್ದೋ ಒಟ್ಟು ಸರ್ಕಾರ ಉತ್ತರ ಹೇಳುವುದು. ಈಗ ಇಲ್ಲಿ ಒಂದು ಸಣ್ಣ mistake ಕಾಣುತ್ತಿರುವುದು ಏನೆಂದರೆ, ಇಲ್ಲಿ ಈ ಪ್ರಶ್ನೆಗೆ ಸಮರ್ಪಕವಾದ ಉತ್ತರವಿಲ್ಲ.

**ಶ್ರೀ ಸಿದ್ದು ಬಿ. ನ್ಯಾಮಗೌಡ:–** ಸರ್, ಭಾರಿ ನೀರಾವರಿ ಸಚಿವರಿಗೆ ಈ ಪ್ರಶ್ನೆಯನ್ನು ವರ್ಗಾಯಿಸಿ.

**ಅಧ್ಯಕ್ಷರು:–** ಅವರಿಗೆ ವರ್ಗಾಯಿಸೋಣ ಬಿಡಿ. ವರ್ಗಾಯಿಸಲಾಗಿದೆ. ಆಯಿತು.

## ಅರಣ್ಯ ಅಭಿವೃದ್ಧಿ ಮತ್ತು ಸಂರಕ್ಷಣೆ

**89(604); ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ)**

ಅ) ಬೀದರ್ ಜಿಲ್ಲೆಯಲ್ಲಿ ರಕ್ಷಿತ ಅರಣ್ಯ ಹಾಗೂ ಸಾಮಾನ್ಯ ಅರಣ್ಯ ಪ್ರದೇಶ ಎಷ್ಟಿದೆ; (ಸಂಪೂರ್ಣ ವಿವರ ನಿಡುವುದು);

ಆ) ಈ ಅರಣ್ಯ ಪ್ರದೇಶದಲ್ಲಿ ಗಂಧದ ಮರಗಳ ಸಂಖ್ಯೆ ಎಷ್ಟು; ಇವುಗಳನ್ನು ಸಂರಕ್ಷಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು;

ಇ) ಕಳೆದ ಮೂರು ವರ್ಷಗಳಲ್ಲಿ ಅರಣ್ಯ ಕ್ಷೇತ್ರವನ್ನು ಹೆಚ್ಚಿಸಲು ಎಷ್ಟು ಗಿಡಗಳನ್ನು ನೆಡಲಾಗಿದೆ; (ವಿವರ ನೀಡುವುದು)?